# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1548 (ಗ್ರಾಮೀಣಾಭಿವೃದ್ಧಿ & ಪಂ.ರಾಜ್ ಇಲಾಖೆಯಿಂದ ವರ್ಗಾವಣೆಗೊಂಡಿರುವ) |
| ಸದಸ್ಯರ ಹೆಸರು | ಶ್ರೀ ಮುನಿರಾಜುಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 24.09.2021 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಗ್ರಾಮ ಪಂಚಾಯತಿ ಅಡಿಯಲ್ಲಿ ಬರುವ ಗ್ರಾಮಗಳ ಗ್ರಾಮಠಾಣಾ ವ್ಯಾಪ್ತಿಯನ್ನು ಯಾವಾಗ ನಿಗಧಿಪಡಿಸಲಾಗಿದೆ; (ವಿವರ ನೀಡುವುದು)</td><td>ರಾಜ್ಯದಲ್ಲಿ ಮೂಲ ಸರ್ವೆ ಮತ್ತು ರೀ ಸರ್ವೆ ಕಾಲಕ್ಕೆ ಎಲ್ಲಾ ಗ್ರಾಮಗಳ ಕೃಷಿ ಜಮಿನುಗಳಲ್ಲಿ ಅಳತೆ ಮಾಡಿ ಗಡಿ ಗುರ್ತಿಸಿ ನಂತರ ಉಳಿದ ಜನವಸತಿ (ಗ್ರಾಮಠಾಣಾ) ಪ್ರದೇಶಗಳನ್ನು ಜಮೀನು ಸ್ಥಿತಿಯಂತೆ ಗುರ್ತಿಸಿ ದಾಖಲೆಗಳನ್ನು ತಯಾರಿಸಲಾಗಿದ್ದು, ಅದರಂತೆ, ಗ್ರಾಮ ನಕಾಶೆಯಲ್ಲಿ ಸಹ ದಾಖಲಿಸಲಾಗಿದೆ.<br>ರಾಜ್ಯದ ವಿವಿಧ ಪ್ರಾಂತ್ಯಗಳಲ್ಲಿ ಕೆಳಕಂಡ ವರ್ಷಗಳಲ್ಲಿ ದಾಖಲೆ ತಯಾರಿಕೆ ಕಾರ್ಯ ಪೂರ್ಣಗೊಳಿಸಲಾಗಿದೆ.
<table>
<tr><th>ಪ್ರಾಂತ್ಯ</th><th>ಮೂಲ ಸರ್ವೆ</th><th>ರೀ-ಸರ್ವೆ</th></tr>
<tr><td>ಹಳೇ ಮೈಸೂರು ಪ್ರಾಂತ್ಯ</td><td>1863-1899</td><td>1900-1917</td></tr>
<tr><td>ಮುಂಬೈ ಪ್ರಾಂತ್ಯ</td><td>1840-1863</td><td>1906-1921</td></tr>
<tr><td>ಮದರಾಸು ಪ್ರಾಂತ್ಯ</td><td>1863-1904</td><td>1923-1935</td></tr>
<tr><td>ಹೈದರಾಬಾದ್ ಪ್ರಾಂತ್ಯ</td><td>1875-1888</td><td>1906-1916</td></tr>
<tr><td>ಕೊಡಗು ಪ್ರಾಂತ್ಯ</td><td>1806-1816</td><td>1906-1912</td></tr>
</table></td></tr>
<tr><td>ಆ)</td><td>ಪ್ರಸ್ತುತ ಗ್ರಾಮಗಳಲ್ಲಿ ಜನಸಂಖ್ಯೆ ಹೆಚ್ಚಾಗಿದ್ದು, ಗ್ರಾಮಠಾಣಾ ವ್ಯಾಪ್ತಿಯಿಂದ ಹೊರಗೆ ಮನೆಗಳನ್ನು ನಿರ್ಮಿಸಿಕೊಂಡು ಜನರು ಜೀವನ ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
<tr><td>ಇ)</td><td>ಹಾಗಿದ್ದಲ್ಲಿ ಗ್ರಾಮಠಾಣಾ ವ್ಯಾಪ್ತಿಯಿಂದ ಹೊರಗೆ ವಾಸಿಸುತ್ತಿರುವ ಜನರು ಮೂಲ ಭೂತ ಸೌಕರ್ಯಗಳಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
<tr><td>ಈ)</td><td>ಗ್ರಾಮಠಾಣಾ ವ್ಯಾಪ್ತಿಯನ್ನು ವಿಸ್ತರಿಸುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ; ಇದ್ದಲ್ಲಿ ಯಾವಾಗ ವಿಸ್ತರಿಸಲಾಗುವುದು ಮತ್ತು ಎಷ್ಟು ವ್ಯಾಪ್ತಿಯನ್ನು ವಿಸ್ತರಿಸಲಾಗುವುದು? (ವಿವರ ನೀಡುವುದು)</td><td>ಗ್ರಾಮಠಾಣಾ ವ್ಯಾಪ್ತಿಯನ್ನು ವಿಸ್ತರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆ. ಅದಕ್ಕಾಗಿ ಸರ್ಕಾರವು ರಾಜ್ಯದಲ್ಲಿ ಅತ್ಯಾಧುನಿಕ ತಂತ್ರಜ್ಞಾನವಾದ ಡ್ರೋಣ್ ಬಳಸಿ ಸರ್ವೆ ಆಫ್ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ರಾಜ್ಯದಲ್ಲಿ ಮರು ಭೂಮಾಪನ ಕೈಗೊಳ್ಳಲು ನಿರ್ಧರಿಸಿದ್ದು, 1ನೇ</td></tr>
</table>

| | | |
|---|---|---|
| | | ಹಂತದಲ್ಲಿ 5 ಜಿಲ್ಲೆಗಳಲ್ಲಿ & 2ನೇ ಹಂತದಲ್ಲಿ 8 ಜಿಲ್ಲೆಗಳಲ್ಲಿ ಮರು ಭೂಮಾಪನ ಕಾರ್ಯ ಕೈಗೊಳ್ಳಲು ಆದೇಶಿಸಿದೆ. ಅದರಂತೆ ಪೂರ್ವ ಸಿದ್ಧತೆ ಕಾರ್ಯ ಪ್ರಾರಂಭಿಸಲಾಗಿದ್ದು, ಪ್ರಾಯೋಗಿಕವಾಗಿ ರಾಮನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಡ್ರೋನ್ ಸರ್ವೆ ಕಾರ್ಯವನ್ನು ಪ್ರಾರಂಭಿಸಿ, ಗ್ರೌಂಡ್ ಕಂಟ್ರೋಲ್ ಪಾಯಿಂಟ್‌ಗಳನ್ನು ಸ್ಥಾಪಿಸಿದ್ದು, Drone-Flying ಕಾರ್ಯವನ್ನು ಪ್ರಾರಂಭಿಸಲಾಗಿದೆ.<br><br>ಅದೇ ರೀತಿಯಾಗಿ ಹಂತ ಹಂತವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಹಾ ಮರುಭೂಮಾಪನ ಕಾರ್ಯ ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ರೀತಿಯಾಗಿ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಮರು ಭೂಮಾಪನ ಕಾರ್ಯ ಕೈಗೊಂಡು ರಾಜ್ಯದ ಜನವಸತಿ ಪ್ರದೇಶಗಳನ್ನು (ಗ್ರಾಮಠಾಣಾ) ಜಮೀನು ಸ್ಥಿತಿಯಂತೆ ಅಳತೆ ಮಾಡಿ ಗಡಿ ಗುರ್ತಿಸಿ ದಾಖಲೆ ತಯಾರಿಸಲು ಕ್ರಮ ಕೈಗೊಳ್ಳಲಾಗುವುದು<br><br>ಅಲ್ಲದೆ ಕೇಂದ್ರ ಸರ್ಕಾರವು ಗ್ರಾಮೀಣ ಜನವಸತಿ ಪ್ರದೇಶಕ್ಕೆ ಹಕ್ಕುದಾಖಲೆಗಳ ಸಿದ್ಧಪಡಿಸಿ, ವಿತರಿಸುವ ಉದ್ದೇಶದಿಂದ ಕಂದಾಯ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ& ಪಂಚಾಯತ್ ರಾಜ್ ಇಲಾಖೆಗಳ ಜಂಟಿ ಸಹಭಾಗಿತ್ವ ಮತ್ತು ಸಹಯೋಗದೊಂದಿಗೆ ಸ್ವಮಿತ್ವ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯಡಿ ಗ್ರಾಮೀಣ ಜನವಸತಿ ಪ್ರದೇಶದ ಆಸ್ತಿಗಳನ್ನು ಸರ್ವೆ ಆಫ್ ಇಂಡಿಯಾ ಸಂಸ್ಥೆಯಿಂದ ಡ್ರೋಣ್ ಸರ್ವೆ ಮೂಲಕ ಅಳತೆ ಮಾಡಿ ಹಕ್ಕು ದಾಖಲೆಗಳನ್ನು ಸಿದ್ಧಪಡಿಸಿ, ಸಾರ್ವಜನಿಕರಿಗೆ ವಿತರಿಸಲಾಗುತ್ತಿದೆ.<br><br>ಸ್ವಮಿತ್ವ ಯೋಜನೆ ಅಡಿಯಲ್ಲಿ ಗ್ರಾಮೀಣ ಭಾಗದ ಜನವಸತಿ ಪ್ರದೇಶಗಳನ್ನು ಅಳತೆ ಮಾಡಿ ಹಕ್ಕುದಾಖಲೆಗಳನ್ನು ವಿತರಿಸಿ ಗ್ರಾಮ ಠಾಣಾ ಗಡಿಗಳನ್ನು ನಿರ್ಧರಿಸಲಾಗುವುದು. |

**ಸಂಖ್ಯೆ: ಕಂಇ/166/ಎಸ್‌ಎಸ್‌ಸಿ/2021**

(ಆರ್.ಅಶೋಕ)
ಕಂದಾಯ ಸಚಿವರು